# ಕೋಗಿಲೆ ಕಲಿಸಿದ ಪಾಠ

■ ಮಾದ್ರೆ ರವೀಂದ್ರ,
ಶನಿವಾರಸಂತೆ



ಪುನೀತ ತುಂಟ ಹುಡುಗ. ಕೇವಲ ತುಂಟನಾಗಿದ್ದರೆ ಬಾಲ್ಯದ ಸಹಜ ಗುಣ ಎನ್ನಬಹುದು. ಆದರೆ ಕಿತಾಪತಿ ಮಾಡುವುದು, ವಿಪರೀತ ಮಾತಾಡುವುದು, ಯಾರಾದರು ಮಾತಾಡುವಾಗ ತಾನು ದೊಡ್ಡ ಬುದ್ಧಿವಂತ ಎಂದು ತೋರ್ಪಡಿಸಲು ಮಧ್ಯೆ ಬಾಯಿ ಹಾಕುವುದು ಮಾಡುತ್ತಿದ್ದನು. ಸ್ನೇಹಿತರ ಗುಂಪಿನಲ್ಲಿ ತನ್ನ ಮಾತೇ ನಡೆಯಬೇಕು ಎಂಬಂತೆ ವರ್ತಿಸುತ್ತಿದ್ದನು.

ಕ್ರಿಕೆಟ್ ಆಡುವಾಗ ತಾನೇ ಮೊದಲು ಬ್ಯಾಟಿಂಗ್, ಬೌಲಿಂಗ್ ಮಾಡಲು ಓಡುತ್ತಿದ್ದನು. ಖೋ ಖೋ, ಕಬ್ಬಡ್ಡಿ ಆಡಿವಾಗಲು 'ತಾನೇ ಮೇಲು' ಎಂಬಂತೆ ನಡೆದುಕೊಳ್ಳುತ್ತಿದ್ದನು. ಕ್ರಮೇಣ ಆಟಗಳನ್ನು ಆಡುವಾಗ ಪುನೀತ ನಮ್ಮ ತಂಡಕ್ಕೆ ಬೇಕು ಎಂದು ಯಾರೂ ಹೇಳುತ್ತಿರಲಿಲ್ಲ. ಆಗ ಪುನೀತನಿಗೆ ತನ್ನ ಮಾತಿಗೆ ಯಾರೂ ಕಿಮ್ಮತ್ತು ನೀಡುತ್ತಿಲ್ಲವೆಂದು ಬೇಸರವಾಗುತ್ತಿತ್ತು. ಆದರೆ ತನ್ನ ನಡತೆಯೇ ಕಾರಣವೆಂದು ಅವನಿಗೆ ಅರ್ಥವಾಗುತ್ತಿರಲಿಲ್ಲ.

ಪುನೀತನ ತಾಯಿಗೂ ಅವನ ವರ್ತನೆ ಬೇಸರ ತರಿಸಿತ್ತು. ದೊಡ್ಡವರು ಮಾತಾಡುವಾಗ ಮಧ್ಯೆ ಮಾತಾಡಬಾರದು. ಸ್ನೇಹಿತರೊಂದಿಗೆ ಸಮಾಧಾನದಿಂದ ನಡೆದುಕೊಳ್ಳಬೇಕು. ನಾವು ಮಾತನಾಡುವುದಕ್ಕಿಂತ ನಮ್ಮ ನಡತೆಯಿಂದ ಒಳ್ಳೆಯವರು ಅನ್ನಿಸಿಕೊಳ್ಳಬೇಕು ಎಂದು ತುಂಬ ಸಲ ಬುದ್ಧಿ ಹೇಳಿದ್ದರು. ಆದರೆ ಹುಟ್ಟುಗುಣ ಎನ್ನುವಂತೆ ಮತ್ತೆ ಅದೇ ಚಾಳಿ ಮುಂದುವರೆಸುತ್ತಿದ್ದನು.

ಒಂದು ದಿನ ತೋಟದಲ್ಲಿ ಕೆಲಸ ಮಾಡುತ್ತಿದ್ದ ಪುನೀತನ ತಂದೆಗೆ ಊಟ ತೆಗೆದುಕೊಂಡು ಅವನ ತಾಯಿಯು ಹೊರಟರು. ಪುನೀತ ತಾನೂ ತೋಟಕ್ಕೆ ಬರುವೆನೆಂದು ಹೊರಟನು. ತೋಟಕ್ಕೆ ಹೋಗುವ ದಾರಿಯಲ್ಲಿ 'ಕು..ಕೂ...ಕೂ....' ಎಂದು ಕಪ್ಪು ಬಣ್ಣದ ಹಕ್ಕಿ ಮರಿಯೊಂದು ನರಳುತ್ತ ಬಿದ್ದಿರುವುದನ್ನು ನೋಡಿದನು. ಅದರ ಮೈಯೆಲ್ಲ ಗಾಯವಾಗಿತ್ತು.

ಅಮ್ಮಾ ಇಲ್ಲಿ ನೋಡು ಹಕ್ಕಿಮರಿ...ಒಂದೇ ಬಿದ್ದುಕೊಂಟಿದೆ... ಗಾಯ ಬೇರೆ ಆಗಿದೆ... ಅದರ ಅಮ್ಮನಿಗೆ ಮರಿಯನ್ನು ಸರಿಯಾಗಿ ನೋಡಿಕೊಳ್ಳಲು ಏನು ಕಷ್ಟ... ಎಂದು ಹಕ್ಕಿಮರಿಯನ್ನು ಕಂಡು ಮರುಕಪಟ್ಟನು.

ಮಗೂ, ಇದು ಕೋಗಿಲೆಯ ಮರಿ. ಇದನ್ನು ಸಾಕಿದ್ದು ಕಾಗೆಗಳು. ಮೇಲೆ ನೋಡು, ಆ ಮರದಲ್ಲಿ ಕಾಗೆಯ ಗೂಡು ಇದೆ. ಕೋಗಿಲೆಗಳು ಗೂಡು ಕಟ್ಟಿ ಮರಿ ಮಾಡುವುದಿಲ್ಲ. ಅವು ಕಾಗೆಯ ಗೂಡಿನಲ್ಲಿ ಕಾಗೆಗೆ ಗೊತ್ತಾಗದಂತೆ ಮೊಟ್ಟೆ ಇಡುತ್ತವೆ. ಕಾಗೆ ಆ ಮೊಟ್ಟೆ ತನ್ನದೇ ಎಂದು ಭಾವಿಸಿ ಕಾವು ಕೊಟ್ಟು ಮರಿ ಮಾಡುತ್ತವೆ. ಕೋಗಿಲೆಯ ಮರಿ ತುಂಬಾ ವಾಚಾಳಿ. ಎಲ್ಲ ಸಮಯದಲ್ಲು ಕಚಪಚ ಮಾತಾಡಲು ಪ್ರಯತ್ನಿಸುತ್ತವೆ, ಕಾಗೆಗಳಿಗೆ ಇದರ ಸ್ವರ ತಿಳಿದು ತಮ್ಮ ಜಾತಿಯದ್ದಲ್ಲವೆಂದು ಇದನ್ನು ಗೂಡಿನಿಂದ ಹೊರಗೆ ತಳ್ಳಿರಬೇಕು. ತುಂಬ ಮಾತಾಡುವುದರಿಂದ ಇದಕ್ಕೆ ಈ ಶಿಕ್ಷೆ ದೊರೆಯಿತು. ಮೌನವಾಗಿರುತ್ತಿದ್ದರೆ ಇದಕ್ಕೆ ಹಾರುವ ಶಕ್ತಿ ಬರುವವರೆಗೆ ಸುಖವಾಗಿ ಕಾಗೆಗಳ ರಕ್ಷಣೆಯಲ್ಲಿ ಇರಬಹುದಿತ್ತು. ಯಾರಿಗೂ ಸಹ ಹೆಚ್ಚು ಮಾತಾಡಿದರೆ ತೊಂದರೆ ತಪ್ಪಿದ್ದಲ್ಲ... ಎಂದು ಪುನೀತನ ವಾಚಾಳಿತನವನ್ನು ತಿದ್ದಲು ಇದೇ ಒಳ್ಳೆಯ ಸಮಯವೆಂದು ಕೋಗಿಲೆ ಮರಿಯ ಉದಾಹರಣೆಯನ್ನು ಹೇಳಿದರು.

ಪುನೀತನಿಗೆ ಕೋಗಿಲೆ ಮರಿಯ ಕಥೆಯ ತತ್ವ ಅರ್ಥವಾಯಿತು. ಹೆಚ್ಚು ಮಾತಾಡುವುದನ್ನು ನಿಲ್ಲಿಸಿದನು. ಕ್ರಮೇಣ ಪುನೀತ ಒಳ್ಳೆಯ ಹುಡುಗನೆಂದು ಎಲ್ಲರ ಮೆಚ್ಚುಗೆಗೆ ಪಾತ್ರನಾದನು. ■



# ಊಸರವಳ್ಳಿ

■ ಮಾಸ ಬೆಳಲಗೆರೆ

ಊಸರವಳ್ಳಿ ಊಸರವಳ್ಳಿ
ನೀನು ಬಣ್ಣದ ಬಳ್ಳಿ!
ನನ್ನಯ ಚಿತ್ರಕೆ
ಬಣ್ಣವ ಹಾಕುವೆ
ಕೊಡುವೆಯ ಬಣ್ಣವ ಕಳ್ಳಿ!

ಹಸಿರು ಗಿಡದಲಿ ಹಸಿರಾಗಿರುವೆ
ಕೆಂಪು ಹೂವಲಿ ಕೆಂಪಾಗಿರುವೆ
ನೀ ಬಣ್ಣ ಬದಲಿಸುವ ಪಾಟಾಳಿ!

ಬುಗರಿಯಂತೆ ಕಣ್ಗಳ ತಿರುಗಿಸಿ
ನಳ್ಳಿಯಂತೆ ಮೈಯನು ಎಬ್ಬಿಸಿ
ಬಿಂಕದಿ ನಡೆಯುವೆ ನೀ ಮಳ್ಳಿ! ■